ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ. 743 /2019

ಸಿ.ಡಬ್ಲ್ಯೂ:7 ಪಿ.ಡಬ್ಲ್ಯೂ:6

ಸಾಕ್ಷಿಗೆ ದಿನಾಂಕ :-11/01/2024 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ನಾಮದೇವ |
| ತಂ/ಗಂ. ಹೆಸರು | ರಾಮಚಂದ್ರ ಕಾಂಬ್ಳೆ |
| ವಯಸ್ಸು | 49 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಿಂದಗಿ |

**ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ**

ಚಾ ಸಾ 1 ರವರು ನನ್ನ ಸಂಬಂಧಿ. ಉಳಿದ ಸಾಕ್ಷಿದಾರರ ಗೊತ್ತು.

ದಿನಾಂಕ 30-07-2019 ರಂದು ಚಾ ಸಾ 1 ರವರ ಗಂಡನ ಅಪಘಾತವಾಗಿದ್ದು ನಾನುಅವರು ಕರೆದಾಗ ಅವರ ಜೊತೆ ಪೋಲಿಸ್ ಠಾಣೆಗೆ ಹೋಗಿದ್ದೆ ಆಗ ಚಾ ಸಾ 1 ರವರು ಹೇಳಿದಂತೆ ನಾನು ದೂರನ್ನು ಬರೆದಿರುತ್ತೇನೆ. ಸಾಕ್ಷಿಗೆ ತೋರಿಸಲಾದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 9 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿ ನಿಪಿ 9 ಸಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀಮತಿ ಆರ್ ಎಮ್ ಶಿ ವಕೀಲರಿಂದ**

ಚಾ ಸಾ 1 ರಿಂದ 4 ರವರು ನನ್ನ ಸಮಾಜದವರು ಎಂದರೆ ನಿಜ. ಚಾ ಸಾ 1 ರವರು ದೂರಿನಿಂದ ನನಗೆ ಸಂಬಂಧಿಕಳಾಗಬೇಕು. ಸದರಿ ದೂರು ಬರೆಯುವ ಸಮಯದಲ್ಲಿ ನಾನು ಚಾಸಾ 1 ಮನೋಹರ, ಬಾಲಚಂದ್ರ ರವರು ಇದ್ದೇವು. ಪೋಲಿಸರು ಹೇಳಿದಂತೆ ನಿ ಪಿ 9 ನ್ನು ನಾನು ಬರೆದಿರುತ್ತೆನೆ ಎಂದರೆ ಸರಿಯಲ್ಲ. ಚಾ ಸಾ 1 ರವರು ಹೇಳಿದಂತೆ ಬರೆದಿರುತ್ತೇನೆ. ಎಲ್ಲರೂ ಒಂದೇ ಸಮಾಜದವರು ಇರುವ ಕಾರಣ ಖೊಟ್ಟಿ ರೀತಿಯ ದೂರು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ದೂರನ್ನು ಮಾತ್ರ ಬರೆದಿದ್ದು ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾ ಸಾ 1 ರವರಿಗೆ ಅನುಕೂಲವಾಗಲಿ ಎಂದು ಅವಳು ಹೇಳಿದಂತೆ ದೂರು ಬರೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ